I/29385/2022

ಕರ್ನಾಟಕ ಸರ್ಕಾರ
**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ**
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
Government of Karnataka
**Karnataka Residential Educational Institutions Society**
(An Organisation of Govt. of Karnataka)

ಕವಶಿಸಸ/ಆಡಳಿತ/ಸಿಬ್ಬಂದಿ/ಸಿಆರ್-42/2020-21 ದಿನಾಂಕ 23.11.2022

**ಅಧಿಕೃತ ಜ್ಞಾಪನ**

ವಿಷಯ: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ತಿದ್ದುಪಡಿ ಮಾಡುವ ಬಗ್ಗೆ.
ಉಲ್ಲೇಖ 1 ಸರ್ಕಾರದ ಪತ್ರ ಸಂಖ್ಯೆ: ಸಕಇ 324 ಎಂಡಿಎಸ್ 2022, ದಿ:16.11.2022.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡುವ ಕುರಿತಂತೆ ದಿನಾಂಕ 30.09.2022 ರಂದು ಪ್ರಕಟಿಸಿದ ಕರಡು ನಿಯಮಗಳಿಗೆ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಕ್ರೋಢೀಕರಿಸಿ ಆಕ್ಷೇಪಣೆಗಳನ್ನು ಪರಿಶೀಲಿಸಿ ವಿವರಗಳ ಪಟ್ಟಿಯನ್ನು ಉಲ್ಲೇಖಿತ ಸರ್ಕಾರದ ಪತ್ರದೊಂದಿಗೆ ಲಗತ್ತಿಸಿ, ಸಂಘದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಿ, ಬಾಧಿತರಿಗೆ ಲಭ್ಯವಾಗುವಂತೆ ಕ್ರಮವಹಿಸಲು ನಿರ್ದೇಶಿಸಲಾಗಿದೆ.

ಉಲ್ಲೇಖಿತ ಸರ್ಕಾರದ ಪತ್ರದ ನಿರ್ದೇಶನದಂತೆ ಸ್ವೀಕೃತವಾಗಿರುವ ಆಕ್ಷೇಪಣೆಗಳಿಗೆ ಹಿಂಬರವನ್ನು ಈ ಪತ್ರದೊಂದಿಗೆ ಸಂಘದ ಅಧಿಕೃತ ವೆಬ್‌ಸೈಟ್ https://kreis.karnataka.gov.in/. ರಲ್ಲಿ ಪ್ರಕಟಿಸಲಾಗಿದೆ.

Signed by Ramesh Desai
Date: 30-11-2022 16:09:14

ಕಾರ್ಯನಿರ್ವಾಹಕ ನಿರ್ದೇಶಕರು

I/29385/2022

ನಂ.8, ಎಮ್.ಎಸ್.ಬಿ.-1,6&7ನೇ ಮಹಡಿ, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು-560052, ದೂರವಾಣಿ: 080-22283366, 222265755, 22204466, 22207722, ಟೆಲಿಫ್ಯಾಕ್ಸ್ : 080-22262288
#8, M.S.B-1,6th & 7th Floor, Cunningham Road, Bengaluru-560052. Phone: 080-22283366, 222265755, 22204466, 22207722, Telefax : 080-22262288
Email : edkreis@rediffmail.com, ed.kreis@ka.gov.in Website : www.kreis.kar.nic.in

**ಕರ್ನಾಟಕ ಸರ್ಕಾರ**

ಸಂಖ್ಯೆ:ಸಕಇ 324 ಎಂಡಿಎಸ್ 2022

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:16.11.2022

**ಇವರಿಂದ:**

ಸರ್ಕಾರದ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು.

**ಇವರಿಗೆ:**

ಕಾರ್ಯನಿರ್ವಾಹಕ ನಿರ್ದೇಶಕರು,
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ,
ಬೆಂಗಳೂರು.

ಮಾನ್ಯರೇ,

ವಿಷಯ: ವಸತಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದೈಹಿಕ ಶಿಕ್ಷಕರುಗಳಿಗೆ ಪ್ರಾಂಶುಪಾಲರ ಹುದ್ದೆಗೆ ಮುಂಬಡ್ತಿ ನೀಡುವ ಕುರಿತು.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರ ತಿದ್ದುಪಡಿ ಮಾಡುವ ಕುರಿತಂತೆ ದಿನಾಂಕ:30.09.2022 ರಂದು ಪ್ರಕಟಿಸಿದ ಕರಡು ನಿಯಮಗಳಿಗೆ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿ ಆಕ್ಷೇಪಣೆಗಳಿಗೆ ನಿಯಮಗಳನ್ವಯ ನಿಯಮಾನುಸಾರ ಪರಿಶೀಲಿಸಿ ವಿವರಗಳ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ. ಇದನ್ನು ಸಂಘದ ಅಧಿಕೃತ ವೆಬ್ ಸೈಟ್‌ನಲ್ಲಿ ಪ್ರಕಟಿಸಿ, ಬಾಧಿತರಿಗೆ ಲಭ್ಯವಾಗುವಂತೆ ಕ್ರಮವಹಿಸುವಂತೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಶಂಭುಲಿಂಗಯ್ಯ)
ಸರ್ಕಾರದ ಜಂಟಿ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ.



Generated from eOffice by NAGARAJ K L, KREIS-ADM-FDA(NKL), FIRST DIVISION ASSISTANT, KARNATAKA RESIDENTAL EDUCATIONAL INSTITUTIONS SOCIETY on 01/12/2022

**ದಿನಾಂಕ 30.09.2022 ರಂದು ಪ್ರಕಟಿಸಲಾಗಿರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕರಡು ವೃಂದ ಮತ್ತು ನೇಮಕಾತಿ ನಿಮಯಗಳ ತಿದ್ದುಪಡಿಗಳಿಗೆ ಸಲ್ಲಿಸಿರುವ ಆಕ್ಷೇಪಣೆಗಳನ್ನು ಪರಿಗಣಿಸಿ ಹಿಂಬರಹ ನೀಡಿರುವ ಬಗ್ಗೆ.**

| ಕ್ರ. ಸಂ | ಸ್ವೀಕೃತಿ ಸಂಖ್ಯೆ & ದಿನಾಂಕ | ಆಕ್ಷೇಪಣೆ ಸಲ್ಲಿಸಿರುವವರ ವಿವರ | ಆಕ್ಷೇಪಣೆಯ ವಿವರ | ಷರಾ |
|---|---|---|---|---|
| 1 ರಿಂದ 47 | 4841398 | ಶ್ರೀ. ಶ್ರೀಧರ ಶೆಟ್ಟಿ ದೈಹಿಕ ಶಿಕ್ಷಕರು ಮತ್ತು ಇತರೆ 46 ಆಕ್ಷೇಪಣೆಗಳು | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಕರ್ನಾಟಕ ರಾಜ್ಯ ಪತ್ರ ಅಧಿಕೃತ ಪ್ರಕಟಿಸಲಾದುದು ಸಂಪುಟ 157 ಸಂಚಿಕ 33 ವುಳ್ಳ ಅಧಿಸೂಚನೆ ಸಂಖ್ಯೆ ಎಸ್‌ಡಬ್ಲ್ಯೂಡಿ 345 ಎಂಡಿಎಸ್ 2021, ಕರ್ನಾಟಕ ಸರ್ಕಾರದ ಸಚಿವಾಲಯ ವಿಕಾಸಸೌಧ ಬೆಂಗಳೂರು ದಿನಾಂಕ16.02.2022 ರನ್ವಯ ವೃಂದ ಮತ್ತು ನೇಮಕಾತಿ ನಿಯಮಗಳಂತೆ ಹಾಗೂ ಸಂಘದಲ್ಲಿ ಅಳವಡಿಸಿಕೊಂಡು ಕಾನೂನು ಬದ್ದವಾಗಿ ಈ ಕೆಳಕಂಡಂತೆ ಇರುತ್ತದೆ.<br><br>ಗೌರವಾನ್ವಿತರಲ್ಲಿ ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗಳು -2021, ದಿನಾಂಕ 16.02.2022 ರನ್ವಯ ಈಗಾಗಲೇ ನಮ್ಮ ಕರಡು ವೃಂದ ಮತ್ತು ನಿಯಮಾವಳಿಯ ಪ್ರಕಾರ ಸಂಯುಕ್ತ ಜೇಷ್ಠತಾ ಪಟ್ಟಿ ಹಾಗೂ ಎಲ್ಲಾ ಶಿಕ್ಷಕ ವೃಂದದವರನ್ನು ಪುಟ ಸಂಖ್ಯೆ 2226 ಕ್ರಮಸಂಖ್ಯೆ 26 ರಲ್ಲಿ ನಮೂದಿಸಲಾಗಿದೆ. "ಕೇಡರ್ ಆಫ್ ಟೀಚರ್:" ಎಂದು ಕರ್ನಾಟಕ ರಾಜ್ಯಪತ್ರದಲ್ಲಿ ನಮೂದಿಸಲಾಗಿರುತ್ತದೆ.<br><br>1. ಕವಶಿಸಸ ವ್ಯಾಪ್ತಿಯಲ್ಲಿನ ವಸತಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ರಾಜ್ಯ ಮಟ್ಟದ ಸಹ ಶಿಕ್ಷಕರುಗಳ ಅಂತಿಮ ಪದಕ್ರಮ ಪಟ್ಟಿ ಕವಶಿಸಸ/ ಆಡಳಿತ/ ಜೇಷ್ಠತೆ/ ಸಿ.ಆರ್.01/ 2019-2020 ರ ದಿನಾಂಕ: 13.11.2020 ರ ಅನ್ವಯ ಎಲ್ಲಾ ಸಹ ಶಿಕ್ಷಕರ ಸಂಯುಕ್ತ ಜೇಷ್ಠತಾ | ಕ್ರಮ ಸಂಖ್ಯೆ 01 ರಿಂದ 47 ರ ವರೆಗಿನ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿರುತ್ತದೆ. ದಿನಾಂಕ 30.09.2022 ರಂದು ಪ್ರಕಟಿಸಲಾಗಿರುವ ಕರಡು ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗಳು ಸರಿಯಾಗಿರುವುದು ಕಂಡು ಬಂದಿರುತ್ತದೆ. ಈ ಹಿನ್ನಲೆಯಲ್ಲಿ ನಿಮ್ಮ ಆಕ್ಷೇಪಣೆಗಳನ್ನು ತಿರಸ್ಕರಿಸಿದೆ. |



Generated from eOffice by NAGARAJ K L, KREIS-ADM-FDA(NKL), FIRST DIVISION ASSISTANT, KARNATAKA RESIDENTAL EDUCATIONAL INSTITUTIONS SOCIETY on 01/12/2022 11:25 AM

| | | | | |
|---|---|---|---|---|
| | | | ಪಟ್ಟಿಯಂತೆ (ಜೆರಾಕ್ಸ್ ಪ್ರತಿ ಲಗತ್ತಿಸಿದೆ).<br><br>2. ಕವಶಿಸ ಸಂಘದ ವ್ಯಾಪ್ತಿಯಲ್ಲಿನ ವಸತಿ ಶಾಲೆಗಳಲ್ಲಿ ಎಲ್ಲಾ ಖಾಯಂ ಸಹ ಶಿಕ್ಷಕರ ಮೂಲ ವಾರ್ಷಿಕ ಕಾರ್ಯನಿರ್ವಹಣಾ ವರದಿ ಪಡೆದಿರುವ ಸಂಖ್ಯೆ: ಕವಶಿಸಸಂ/ ಆಡಳಿತ/ ನೇ.ನೇ/ ಸಿಆರ್-13 / 2019-20 ದಿನಾಂಕ: 18.11.2020 ಉಲ್ಲೇಖ: ಈ ಕಛೇರಿಯ ಪತ್ರ ಸಂಖ್ಯೆ ದಿನಾಂಕ: 20-01-2022 (ಜೆರಾಕ್ಸ್ ಪ್ರತಿ ಲಗತ್ತಿಸಿದೆ).<br><br>3. 75ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು ಗೌರವಾನ್ವಿತ ಸಮಾಜ ಕಲ್ಯಾಣ & ಹಿಂದುಳಿದ ವರ್ಗಗಳ ಸಚಿವರು ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಗೌರ್ನಿಂಗ್ (ಜಿಸಿ) ಸಭೆ ದಿನಾಂಕ: 03.03.2022 (ಜೆರಾಕ್ಸ್ ಪ್ರತಿ ಲಗತ್ತಿಸಿದೆ)<br><br>4. ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿ ದಿನಾಂಕ: 06.06.2022 (ಜೆರಾಕ್ಸ್ ಪ್ರತಿ ಲಗತ್ತಿಸಿದೆ)<br><br>5. ಸರ್ಕಾರದ ಉಪ ಕಾರ್ಯದರ್ಶಿ-2 ಸಮಾಜ ಕಲ್ಯಾಣ ಇಲಾಖೆ ಪತ್ರ ಸಂಖ್ಯೆ; ಸಕಇ 324 ಎಂ.ಡಿ.ಎಸ್. 2020, ದಿ: 11.05.2022 (ಜೆರಾಕ್ಸ್ ಪ್ರತಿ ಲಗತ್ತಿಸಿದೆ)<br><br>6. ಸರ್ಕಾರದ ಉಪ ಕಾರ್ಯದರ್ಶಿ-2 ಸಮಾಜ ಕಲ್ಯಾಣ ಇಲಾಖೆ ಪತ್ರ ಸಂಖ್ಯೆ; ಸಕಇ 324 ಎಂ.ಡಿ.ಎಸ್. 2022 ದಿ: 07.07.2022 (ಜೆರಾಕ್ಸ್ ಪ್ರತಿ ಲಗತ್ತಿಸಿದೆ).<br><br>7. ಗೌರವಾನ್ವಿತ ಕಾರ್ಯನಿರ್ವಾಹಕ ನಿರ್ದೇಶಕರು, ರವರ ಪತ್ರದ ಸಂಖ್ಯೆ: ಕವಶಿಸಸ/ ಆಡಳಿತ/ ಸಿ.ಆರ್/ ಪ್ರಾ.ಮು.ಬ-18/ 2020-21 v" ತಿಳುವಳಿಕೆ ಪತ್ರ" ದಿನಾಂಕ: 07.07.2022 (ಜೆರಾಕ್ಸ್ ಪ್ರತಿ ಲಗತ್ತಿಸಿದೆ). | |

| | | | | |
|---|---|---|---|---|
| | | | 8. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು W.P.No. 14495/2022 (S-RES) ಉಳ್ಳ ಅಂತಿಮ ತೀರ್ಪು ಆದೇಶದ ಪ್ರತಿ. (ಜೆರಾಕ್ಸ್ ಪ್ರತಿಲಗತ್ತಿಸಿದೆ).<br><br>9. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು W.P.NO.12665 / 2022 (S-RES) ಉಳ್ಳ ದಿನಾಂಕ: 16.08.2022 ರ ದಾವೆ ಪ್ರತಿ (ಜೆರಾಕ್ಸ್ ಪ್ರತಿ ಲಗತ್ತಿಸಿದೆ)<br><br>10. ಗೌರವಾನ್ವಿತ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು, ಖುದ್ದಾಗಿ ಭೇಟಿ ಮಾಡಿ ಮನವಿ ಮಾಡಿರುವ ಪ್ರತಿ. ದಿನಾಂಕ: 28.08.2022 (ಜೆರಾಕ್ಸ್ ಪ್ರತಿ ಲಗತ್ತಿಸಿದೆ)<br><br>11. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಮೂಲ ನ್ಯಾಯ ವ್ಯಾಪ್ತಿಯಲ್ಲಿ CONTEMPT/ CCC/ NO. 837/ 2022 W.P. NO. 14495/ 2022 (S-RES) ಉಳ್ಳ ದಾವೆ ಪ್ರತಿ ದಿನಾಂಕ:13.09.2022 ರ ಪ್ರತಿ. (ಜೆರಾಕ್ಸ್ ಪ್ರತಿ ಲಗತ್ತಿಸಿದೆ)<br><br>ಈ ಮೇಲಿನ ಎಲ್ಲಾ ಅಂಶಗಳು ಒಳಗೊಂಡಂತೆ ನಾನು ಪ್ರಾಂಶುಪಾಲರ ಹುದ್ದೆಗೆ ಮುಂಬಡ್ತಿಗೆ ಆಯ್ಕೆಯಾಗಿದ್ದು ಸರಿಯಷ್ಟೆ. ಅಲ್ಲದೆ 08 ರ ಆದೇಶದಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ರವರ ಗೌರವಾನ್ವಿತ ನ್ಯಾಯಾದೀಶರು ಅಂತಿಮ ತೀರ್ಪಿನಲ್ಲಿ ನಮಗೆ "FORTHWITH" (ತಕ್ಷಣವೇ/ ತಡವಿಲ್ಲದೆ/ ವಿಳಂಬ ಮಾಡದೇ) ದೈಹಿಕ ಶಿಕ್ಷಣ ಶಿಕ್ಷಕರಿಗೆ ಪ್ರಾಂಶುಪಾಲರ ವೃಂದಕ್ಕೆ ಪದೋನ್ನತಿ ಕೌನ್ಸಿಲಿಂಗ್ ಮುಖಾಂತರ ಆದೇಶ ನೀಡಬೇಕೆಂದು ತಿಳಿಸಿರುತ್ತಾರೆ. ಈಗಾಗಲೇ ಹಲವಾರು ಬಾರಿ ಮನವಿ ಮಾಡಿದ್ದೇವೆ. ಈ ಮೇಲಿನ ಎಲ್ಲಾ ಅಂಶಗಳನ್ನು | |



Generated from eOffice by NAGARAJ K L, KREIS-ADM-FDA(NKL), FIRST DIVISION ASSISTANT, KARNATAKA RESIDENTAL EDUCATIONAL INSTITUTIONS SOCIETY on 01/12/2022 11:25 AM

| | | | | |
|---|---|---|---|---|
| | | | ಸೂಕ್ಷ್ಮವಾಗಿ ಪರಿಗಣಿಸಿ ನಮಗೆ ನ್ಯಾಯ ಒದಗಿಸಿಕೊಡಬೇಕೆಂದು ಪ್ರಾರ್ಥಿಸುತ್ತಾ, ಉಲ್ಲೇಖದ ಪ್ರಸ್ತಾಪಿಸಿರುವ ವೃಂದ ಮತ್ತು ನೇಮಕಾತಿ ತಿದ್ದುಪಡಿಯಿಂದ ನಮಗೆ ಅನ್ಯಾಯವಾಗುತ್ತದೆ ಎಂದು ಎಂಬ ವಿಷಯವನ್ನು ಈ ಮೂಲಕ ತಮ್ಮ ಅವಗಾಹನೆಗೆ ಸಲ್ಲಿಸುತ್ತಿದ್ದೇನೆ. | |
| 48 ರಿಂದ 61 | 4865904/2022 | ಶ್ರೀ ಹೇಮಂತ್ ಕುಮಾರ್. ಕೆ.ಆರ್<br><br>ಸಮಾಜ ವಿಜ್ಞಾನ ಶಿಕ್ಷಕರು ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆ, ಹುಬ್ಬಳ್ಳಿ ಮತ್ತು ಇತರೆ 13 ಆಕ್ಷೇಪಣೆಗಳು | ಸಮಾಜ ಕಲ್ಯಾಣ ಇಲಾಖೆ ಅಧೀನದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳ ಕರಡು ತಿದ್ದುಪಡಿಯು ದಿನಾಂಕ:01-10-2022ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುವುದನ್ನು ಸಂಘದ ವಿಷಯ ಶಿಕ್ಷಕರಾಗಿ ನಾನು ಸ್ವಾಗತಿಸುತ್ತೇನೆ.<br><br>ಸದರಿ ವೃಂದ ಮತ್ತು ನೇಮಕಾತಿ ನಿಯಮದ ಕರಡು ತಿದ್ದುಪಡಿಯ ಕ್ರ.ಸಂ (26) ರಲ್ಲಿ ಕ್ರೈಸ್ ವಸತಿ ಶಾಲೆಗಳ ಪ್ರಾಂಶುಪಾಲರ ಹುದ್ದೆಗಳ ಮುಂಬಡ್ತಿಗಾಗಿ ಶೇಕಡಾ100 ರಷ್ಟು ಹುದ್ದೆಗಳನ್ನು ವಿಷಯ ಶಿಕ್ಷಕರ ವೃಂದದಿಂದ 5 ವರ್ಷಗಳಿಗೆ ಕಡಿಮೆ ಇರದಂತೆ ಸೇವೆ ಸಲ್ಲಿಸಿರುವ ವಿಷಯ ಶಿಕ್ಷಕರಿಗೆ ನೀಡಲು ಉದ್ದೇಶಿಸಿರುವುದು ಹಾಗೂ ವಿಶೇಷ ಶಿಕ್ಷಕರಾದ ದೈಹಿಕ ಹಾಗೂ ಸಂಗೀತ ಶಿಕ್ಷಕರನ್ನು ಈ ಬಡ್ತಿಯಿಂದ ಹೊರತುಪಡಿಸಲು ಉದ್ದೇಶಿಸಿರುವುದು ಸ್ಪಷ್ಟವಾಗಿದ್ದು ಉಳಿದ ವಿಶೇಷ ಶಿಕ್ಷಕರಾದ ಕಂಪ್ಯೂಟರ್, ಆರ್ಟ ಮತ್ತು ಕ್ರಾಫ್ಟ್ ಶಿಕ್ಷಕರ ಕುರಿತಾಗಿ ಏನನ್ನೂ ಸ್ಪಷ್ಟಪಡಿಸದೇ ಇರುವುದು ಕ್ರೈಸ್ನ ವಿಷಯ ಶಿಕ್ಷಕರಲ್ಲಿ ಗೊಂದಲ ಮೂಡಿಸಿದೆ.<br><br>ಸರ್ಕಾರದ ಪತ್ರ ಸಂಖ್ಯೆ. ಸಕಇ 324 ಎಂ ಡಿ ಎಸ್ 2022 ದಿನಾಂಕ:27-07-2022 ರಲ್ಲಿ ದೈಹಿಕ ಶಿಕ್ಷಕರಿಗೆ ಹಾಗೂ | ಕ್ರಮ ಸಂಖ್ಯೆ 48 ರಿಂದ 61 ರ ವರೆಗಿನ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿರುತ್ತದೆ. ದಿನಾಂಕ 30.09.2022 ರಂದು ಪ್ರಕಟಿಸಲಾಗಿರುವ ಕರಡು ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗಳು ಸರಿಯಾಗಿರುವುದು ಕಂಡು ಬಂದಿರುತ್ತದೆ. ಈ ಹಿನ್ನಲೆಯಲ್ಲಿ ನಿಮ್ಮ ಆಕ್ಷೇಪಣೆಗಳನ್ನು ತಿರಸ್ಕರಿಸಿದೆ. |



Generated from eOffice by NAGARAJ K L, KREIS-ADM-FDA(NKL), FIRST DIVISION ASSISTANT, KARNATAKA RESIDENTAL EDUCATIONAL INSTITUTIONS SOCIETY on 01/12/2022 11:25 AM

| | | | | |
|---|---|---|---|---|
| | | | ಸಂಗೀತ ಶಿಕ್ಷಕರಿಗೆ ಪ್ರಾಂಶುಪಾಲರ ಹುದ್ದೆಗಳಿಗೆ ಪರಿಗಣಿಸುವ ಕುರಿತ ಪತ್ರದ ಕೊನೆಯಲ್ಲಿ ಸರ್ಕಾರವು "Will not be violating the norms of the education dept" ಎಂದು ತಿಳಿಸಿದ್ದು ಇದರ ಪ್ರಕಾರ ಕರ್ನಾಟಕ ಶಿಕ್ಷಣ ಇಲಾಖೆಯ ನಿಯಮಗಳನ್ನು ಉಲ್ಲಂಘಿಸಿದಂತೆ ತಿದ್ದುಪಡಿ ಮಾಡಲು ಆದೇಶ ನೀಡಲಾಗಿರುತ್ತದೆ. ತಿದ್ದುಪಡಿಯಾಗುತ್ತಿರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಯ ಕ್ರ.ಸಂ(26) ರಲ್ಲಿ ಕ್ರೈಸ್ ವಸತಿ ಶಾಲೆಗಳ ಪ್ರಾಂಶುಪಾಲರ ಹುದ್ದೆಗಳ ಬಡ್ತಿಯ ವಿಧಾನದಲ್ಲಿ " **ವಿಷಯ ಶಿಕ್ಷಕರುಗಳ ವೃಂದದಲ್ಲಿ 5 ವರ್ಷಗಳಿಗೆ ಕಡಿಮೆ ಇರದಂತೆ ಸೇವೆ ಸಲ್ಲಿಸಿರತಕ್ಕದ್ದು"** ಎಂಬುದರ ಬದಲಾಗಿ " **ವಿಷಯ ಶಿಕ್ಷಕರುಗಳ(ಕನ್ನಡ, ಆಂಗ್ಲ, ಹಿಂದಿ, ಗಣಿತ, ವಿಜ್ಞಾನ ಹಾಗೂ ಸಮಾಜ ವಿಜ್ಞಾನ) ವೃಂದದಲ್ಲಿ 5 ವರ್ಷಗಳಿಗೆ ಕಡಿಮೆ ಇರದಂತೆ ಸೇವೆ ಸಲ್ಲಿಸಿರತಕ್ಕದ್ದು"** ಎಂದು ಬದಲಾಯಿಸಿ ಶಿಕ್ಷಣ ಇಲಾಖೆಯಲ್ಲಿರುವಂತೆ 6 ಪ್ರಮುಖ ವಿಷಯಗಳ ವಿಷಯ ಶಿಕ್ಷಕರ ಹುದ್ದೆಗಳ ಹೆಸರುಗಳನ್ನು ಸದರಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಿ ಅಂತಿಮಗೊಳಿಸಬೇಕೆಂದು ಆಕ್ಷೇಪಿಸಿರುತ್ತಾರೆ. | |



Generated from eOffice by NAGARAJ K L, KREIS-ADM-FDA(NKL), FIRST DIVISION ASSISTANT, KARNATAKA RESIDENTAL EDUCATIONAL INSTITUTIONS SOCIETY on 01/12/202

| | | | | |
|---|---|---|---|---|
| 62 ರಿಂದ 77 | 4864928/ 2022 | ಶ್ರೀ ಗುಡುದೂರು ಅಭಿಲಾಷ ಗಣಕ ವಿಜ್ಞಾನ ಶಿಕ್ಷಕರು, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಶಿವಮೊಗ್ಗ ಮತ್ತು ಇತರೆ 15 ಆಕ್ಷೇಪಣೆಗಳು | ಅನುಸೂಚಿ-I ರಲ್ಲಿ ಪ್ರಸ್ತಾಪಿತ ವೃಂದ ಮತ್ತು ನೇಮಕಾತಿ ನಿಯಮಗಳು ಕಾಲಂನಲ್ಲಿ "ವಸತಿ ಶಾಲೆಗಳ ಪ್ರಾಂಶುಪಾಲರು" ಹುದ್ದೆಗಳಿಗೆ ನೇಮಕಾತಿ ಕಾಲಂನಲ್ಲಿ ವಿಷಯ ಶಿಕ್ಷಕರ ವೃಂದ ಪೈಕಿ (ದೈಹಿಕ ಶಿಕ್ಷಣ ಹಾಗೂ ಸಂಗೀತ ಶಿಕ್ಷಕರನ್ನು ಹೊರತುಪಡಿಸಿ) ಬಡ್ತಿ ಮೂಲಕ ತುಂಬಬೇಕು ಎಂಬುದಕ್ಕೆ ನಮ್ಮ ಆಕ್ಷೇಪವಿದೆ.<br><br>**ಕಾರಣಗಳು:** ಉಲ್ಲೇಖ (1)ರ ವಿನಿಯಮಗಳಲ್ಲಿ ಶಿಕ್ಷಕರ ವೃಂದದ ಪೈಕಿ ಬಡ್ತಿ ಮೂಲಕ ತುಂಬಬೇಕು ಎಂದು ನಮೂದಿರುತ್ತದೆ. ಉಲ್ಲೇಖ(2) ಮತ್ತು (3) ರ ಪತ್ರಗಳಲ್ಲಿ ದೈಹಿಕ ಶಿಕ್ಷಣ ಹಾಗೂ ಸಂಗೀತ ಶಿಕ್ಷಕರನ್ನು ಪರಿಗಣಿಸದಿರಲು ಪ್ರಸ್ತಾಪಿಸಲಾಗಿದೆ.<br><br>**ಮನವಿ**: ಈ ಮೇಲಿನ ಕಾರಣಗಳಿಂದ, ಅನುಸೂಚಿ-I ರಲ್ಲಿ ಮತ್ತುಅನುಸೂಚಿ-II ರಲ್ಲಿ ಪ್ರಸ್ತಾಪಿತ ವೃಂದ ಮತ್ತು ನೇಮಕಾತಿ ನಿಯಮಗಳು ಕಲಂನಲ್ಲಿ "ವಸತಿ ಶಾಲೆಗಳ ಪ್ರಾಂಶುಪಾಲರು" ಹುದ್ದೆಗಳಿಗೆ ನೇಮಕಾತಿ ಕಲಂನಲ್ಲಿ ಶಿಕ್ಷಕರ ವೃಂದ ಪೈಕಿ (ದೈಹಿಕ ಶಿಕ್ಷಣ ಹಾಗೂ ಸಂಗೀತ ಶಿಕ್ಷಕರನ್ನು ಹೊರತುಪಡಿಸಿ) ಬಡ್ತಿ ಮೂಲಕ ತುಂಬಬೇಕು. | ಕ್ರಮ ಸಂಖ್ಯೆ 62 ರಿಂದ 77 ರ ವರೆಗಿನ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿರುತ್ತದೆ. ದಿನಾಂಕ 30.09.2022 ರಂದು ಪ್ರಕಟಿಸಲಾಗಿರುವ ಕರಡು ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗಳು ಸರಿಯಾಗಿರುವುದು ಕಂಡು ಬಂದಿರುತ್ತದೆ. ಈ ಹಿನ್ನಲೆಯಲ್ಲಿ ನಿಮ್ಮ ಆಕ್ಷೇಪಣೆಗಳನ್ನು ತಿರಸ್ಕರಿಸಿದೆ. |
| 78 ರಿಂದ 82 | 4864634/2022 | ಶ್ರೀ ಗೋಪಾಲದಾಸ, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮಳಬೇಡ ಇತರೆ 04 ಆಕ್ಷೇಪಣೆಗಳು | ಅನುಸೂಚಿ-I ರಲ್ಲಿ ಪ್ರಸ್ತಾಪಿತ ವೃಂದ ಮತ್ತು ನೇಮಕಾತಿ ನಿಯಮಗಳು ಕಲಂನಲ್ಲಿ " ವಸತಿ ಶಾಲೆಗಳ ಪ್ರಾಂಶುಪಾಲರು" ಹುದ್ದೆಗಳಿಗೆ ನೇಮಕಾತಿ ವಿಧಾನದಲ್ಲಿ ಸಂಯೋಜಿತ ಜೇಷ್ಠತೆಯ ಆಧಾರದ ಮೇಲೆ ಎಂಬುದಕ್ಕೆ ನಮ್ಮ ಆಕ್ಷೇಪವಿದೆ.<br><br>**ಕಾರಣಗಳು:** ಉಲ್ಲೇಖದ ಸಂಯುಕ್ತ ಜೇಷ್ಠತಾ ಪಟ್ಟಿಯಂತೆ ಕ್ರಮ ಸಂಖ್ಯೆ 01 ರಿಂದ 409 ರವರೆಗಿನ ಶಿಕ್ಷಕರುಗಳ ಪೈಕಿ 103 ಕನ್ನಡ, 61 ಆಂಗ್ಲ, 67 ಹಿಂದಿ, 10- ಗಣಿತ, 36- | ಕ್ರಮ ಸಂಖ್ಯೆ 78 ರಿಂದ 82 ರ ವರೆಗಿನ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿರುತ್ತದೆ. ದಿನಾಂಕ 30.09.2022 ರಂದು ಪ್ರಕಟಿಸಲಾಗಿರುವ ಕರಡು ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗಳು ಸರಿಯಾಗಿರುವುದು ಕಂಡು ಬಂದಿರುತ್ತದೆ. ಈ ಹಿನ್ನಲೆಯಲ್ಲಿ ನಿಮ್ಮ |

| | | | | |
|---|---|---|---|---|
| | | | ವಿಜ್ಞಾನ, 69 ಸಮಾಜ ವಿಜ್ಞಾನ, 0- ಗಣಕ ವಿಜ್ಞಾನ, 57- ದೈಹಿಕ , 06-ಸಂಗೀತ ಶಿಕ್ಷಕರುಗಳಿಗೆ ಪ್ರಾಂಶುಪಾಲರು ಹುದ್ದೆಗೆ ಪದೋನ್ನತಿ 7 ಪಡೆಯಲು ಅವಕಾಶವಿರುತ್ತದೆ. ಕ್ರಮ ಸಂಖ್ಯೆ 410 ರಿಂದ 548 ರವರೆಗಿನ ಶಿಕ್ಷಕರುಗಳ ಪೈಕಿ 111- ಕನ್ನಡ, 09- ಆಂಗ್ಲ, 03- ಹಿಂದಿ, 1- ಗಣಿತ, 0- ವಿಜ್ಞಾನ, 0- ಸಮಾಜ ವಿಜ್ಞಾನ, 2- ಗಣಕ ವಿಜ್ಞಾನ, 09- ದೈಹಿಕ , 04 ಸಂಗೀತ ಶಿಕ್ಷಕರು ಮಾತ್ರ ಪ್ರಾಂಶುಪಾಲರು ಹುದ್ದೆಗೆ ಪದೋನ್ನತಿ ಪಡೆಯಲು ಅವಕಾಶಸಿಗುತ್ತದೆ. ಈ ಅಂಕಿ ಅಂಶಗಳಿಂದ ಶಿಕ್ಷಕರಿಗೆ ಪದೋನ್ನತಿಯಲ್ಲಿ ಸಮಾನ ಅವಕಾಶ ಲಭಿಸುತ್ತಿಲ್ಲ ಅವಕಾಶವಿರುತ್ತದೆ. ಎಂದು ತಿಳಿದು ಬರುತ್ತದೆ.<br><br>**ಮನವಿ**: ಈ ಮೇಲಿನ ಕಾರಣಗಳಿಂದ, ಅನುಸೂಚಿ-I ರಲ್ಲಿ ಮತ್ತು ಅನುಸೂಚಿ-II ರಲ್ಲಿ ಪ್ರಸ್ತಾಪಿತ ವೃಂದ ಮತ್ತು ನೇಮಕಾತಿ ನಿಯಮಗಳು ಕಾಲಂನಲ್ಲಿ " ವಸತಿ ಶಾಲೆಗಳ ಪ್ರಾಂಶುಪಾಲರು" ಹುದ್ದೆಗಳಿಗೆ ನೇಮಕಾತಿ ವಿಧಾನದಲ್ಲಿ "ಸಮಾನ ಅನುಪಾತದ ಆಧಾರದಲ್ಲಿ ಶಿಕ್ಷಕರ ವೃಂದದ ಪೈಕಿ (ದೈಹಿಕ ಶಿಕ್ಷಣ ಹಾಗೂ ಸಂಗೀತ ಶಿಕ್ಷಕರನ್ನು ಹೊರತುಪಡಿಸಿ) ಬಡ್ತಿ ಮೂಲಕ ತುಂಬಬೇಕು. ಈ ಉದ್ದೇಶಕ್ಕಾಗಿ ವಿಷಯವಾರು ಶಿಕ್ಷಕರ ಪ್ರತ್ಯೇಕ ಜೇಷ್ಠತಾ ಕಮ್ ಮೆರಿಟ್ ಪಟ್ಟಿಯನ್ನು ನಿರ್ವಹಿಸಬೇಕು. ಆಯಾ ವೃಂದದಲ್ಲಿನ ಸೇವಾವಧಿಯ ಆಧಾರದ ಮೇಲೆ ಜೇಷ್ಠತೆಯನ್ನು ನಿರ್ಧರಿಸಬೇಕು" ಎಂಬ ಅಂಶವನ್ನು ಸೇರಿಸಬೇಕಾಗಿ ಕಳಕಳಿಯ ವಿನಂತಿ. | ಆಕ್ಷೇಪಣೆಗಳನ್ನು ತಿರಸ್ಕರಿಸಿದೆ. |



Generated from eOffice by NAGARAJ K L, KREIS-ADM-FDA(NKL), FIRST DIVISION ASSISTANT, KARNATAKA RESIDENTAL EDUCATIONAL INSTITUTIONS SOCIETY on 01/12/2022

| | | | | |
|---|---|---|---|---|
| 83 ಮತ್ತು 84 | 4843506 ದಿನಾಂಕ: 11.10.2022 | ಶ್ರೀ. ಅನಂತನಾಗ್ ಜಿ.ವಿ. ಗಣಕಯಂತ್ರ ಶಿಕ್ಷಕರು ಮತ್ತು ಇತರೆ 01 ಆಕ್ಷೇಪಣೆ | 1. ಪ್ರಸ್ತುತ ಕಾರ್ಯನಿರ್ವಹಿಸುತ್ತಿವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅನೇಕ ಗಣಕಯಂತ್ರ ಶಿಕ್ಷಕರು ಬಿ.ಎಡ್ (B.Ed) ಪದವಿಯ ಜೊತೆಗೆ ಗಣಕ ವಿಜ್ಞಾನ ಅಥವಾ ಗಣಿತಶಾಸ್ತ್ರ, ಅಥವಾ ಭೌತಶಾಸ್ತ್ರ, ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದು, ಉಲ್ಲೇಖಿತ ಅಧಿಸೂಚನೆಯ ಅನುಸೂಚಿ-1 ರ ಹುದ್ದೆಗಳ ಕ್ರಮಸಂಖ್ಯೆ: 26 ರ ಕೆ.ಆರ್.ಇ.ಐ.ಎಸ್. ವಸತಿ ಶಾಲೆಗಳ ಪ್ರಾಂಶುಪಾಲರುಗಳ ಹುದ್ದೆಗಾಗಿ ಬಡ್ತಿಯ ವಿಧಾನ ಹಾಗೂ ಕ್ರಮ ಸಂಖ್ಯೆ 27 ರ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಉಪ ಪ್ರಾಂಶುಪಾಲರ ಹುದ್ದೆಗಳ ಬಡ್ತಿಗೆ ಅರ್ಹರಿರುತ್ತಾರೆ. ಆದ್ದರಿಂದ ಬಿ.ಎಡ್ ಪದವಿಯ ಜೊತೆಗೆ ಗಣಕ ವಿಜ್ಞಾನ ಅಥವಾ ಗಣಿತಶಾಸ್ತ್ರ, ಅಥವಾ ಭೌತಶಾಸ್ತ್ರ, ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರುವ ಗಣಕಯಂತ್ರ ಶಿಕ್ಷಕರಿಗೆ ಜೇಷ್ಠತೆಯ ಆಧಾರದ ಮೇಲೆ ಅನುಸೂಚಿ-1 ರ ಹುದ್ದೆಗಳ ಕ್ರಮಸಂಖ್ಯೆ 26 ರ KREIS ವಸತಿ ಶಾಲೆಗಳ ಪ್ರಾಂಶುಪಾಲರುಗಳ ಹುದ್ದೆಗಾಗಿ ಬಡ್ತಿಯ ವಿಧಾನ ಹಾಗೂ ಕ್ರಮಸಂಖ್ಯೆ 27 ರ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಉಪ ಪ್ರಾಂಶುಪಾಲರ ಹುದ್ದೆಗಳಿಗೆ ಮುಂಬಡ್ತಿಗೆ ಅವಕಾಶ ನೀಡಬೇಕು.<br><br>2. ಎಸ್.ಎಸ್.ಎಲ್.ಸಿ (10ನೇ ತರಗತಿ) ವಿದ್ಯಾರ್ಥಿಗಳಿಗೆ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯವರು ಗಣಕಯಂತ್ರ ಶಿಕ್ಷಣ ಪರೀಕ್ಷೆ ಹಾಗೂ ಗಣಕ ವಿಜ್ಞಾನ ವಿಷಯದ ಎರಡು ವಿಷಯಗಳಾದ ಮಾಹಿತಿ ತಂತ್ರಜ್ಞಾನ (ವಿಷಯ ಸಂಕೇತ:86) ಹಾಗೂ ಎಲಿಮೆಂಟ್ಸ್ ಆಫ್ ಕಂಪ್ಯೂಟರ್ ಸೈನ್ಸ್ (ವಿಷಯ ಸಂಕೇತ74) ವಿಷಯಗಳಲ್ಲಿ ಪ್ರತಿ ವರ್ಷ ಪರೀಕ್ಷೆ ನಡೆಸುತ್ತಿದ್ದಾರೆ. ಸದರಿ ಅಂಶಗಳಿಂದ | ಕ್ರಮ ಸಂಖ್ಯೆ 83 ಮತ್ತು 84 ರ<br><br>ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿರುತ್ತದೆ. ದಿನಾಂಕ 30.09.2022 ರಂದು ಪ್ರಕಟಿಸಲಾಗಿರುವ ಕರಡು ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗಳು ಸರಿಯಾಗಿರುವುದು ಕಂಡು ಬಂದಿರುತ್ತದೆ. ಈ ಹಿನ್ನಲೆಯಲ್ಲಿ ನಿಮ್ಮ ಆಕ್ಷೇಪಣೆಗಳನ್ನು ತಿರಸ್ಕರಿಸಿದೆ. |



Generated from eOffice by NAGARAJ K L, KREIS-ADM-FDA(NKL), FIRST DIVISION ASSISTANT, KARNATAKA RESIDENTAL EDUCATIONAL INSTITUTIONS SOCIETY on 01/12/2022 11:25 AM

| | | | | |
|---|---|---|---|---|
| | | | ಗಣಕಯಂತ್ರ ಶಿಕ್ಷಕರನ್ನು ವಿಷಯ ಶಿಕ್ಷಕರೆಂದು ಪರಿಗಣಿಸಿ, ವಿಷಯ ಶಿಕ್ಷಕರ ವೃಂದಕ್ಕೆ ಸೇರ್ಪಡೆಗೊಳಿಸಿ, ಅನುಸೂಚಿ-1 ರ ಹುದ್ದೆಗಳ ಕ್ರಮಸಂಖ್ಯೆ 26 KREIS ವಸತಿ ಶಾಲೆಗಳ ಪ್ರಾಂಶುಪಾಲರ ಹುದ್ದೆಗಳ ಮುಂಬಡ್ತಿಗೆ ಹಾಗೂ ಕ್ರಮಸಂಖ್ಯೆ 27 ರ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಉಪ ಪ್ರಾಂಶುಪಾಲರ ಹುದ್ದೆಗಳಿಗೆ ಮುಂಬಡ್ತಿಗೆ ಅವಕಾಶ ನೀಡಬೇಕು.<br><br>3. ಸುಮಾರು 4 ಉ 40 ರಿಂದ 50 ಮಾಹಿತಿ ತಂತ್ರಜ್ಞಾನ (IT) ಕೆ.ಆರ್.ಇ.ಐ.ಎಸ್. ವಸತಿ ಶಾಲೆಗಳನ್ನು ಪ್ರಾರಂಭಿಸಿ, ಸದರಿ ವಸತಿ ಶಾಲೆಗಳಿಗೆ ಶೇಕಡ ನೂರರಷ್ಟು ಪ್ರಾಂಶುಪಾಲರ ಹುದ್ದೆಗಳನ್ನು ಜೇಷ್ಠತೆಯ ಆಧಾರದ ಮೇಲೆ ಐದು ವರ್ಷಗಳ ಕಾಲ ಸೇವೆ ಸಲ್ಲಿಸಿದ ಗಣಕಯಂತ್ರ ಶಿಕ್ಷಕರ ವೃಂದದಿಂದ ಬಡ್ತಿಯ ಮೂಲಕ ತುಂಬಲು ಅವಕಾಶ ನೀಡಬೇಕು.<br><br>4. ಅನುಸೂಚಿ-1 ರ ಕ್ರಮಸಂಖ್ಯೆ 27 ರ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಉಪ ಪ್ರಾಂಶುಪಾಲರ ಹುದ್ದೆಗಳ ಬಡ್ತಿಗೆ ಶೇಕಡ ನೂರರಷ್ಟು ಜೇಷ್ಠತೆಯ ಆಧಾರದ ಮೇಲೆ ಐದು ವರ್ಷಗಳ ಕಾಲ ಸೇವೆ ಸಲ್ಲಿಸಿದ ಬಿ.ಎಡ್ ಪದವಿ ಜೊತೆಗೆ ಸ್ನಾತಕೋತ್ತರ ಪದವಿಯನ್ನು ಪಡೆದಿರುವ ಗಣಕಯಂತ್ರ ಶಿಕ್ಷಕರನ್ನು ಬಡ್ತಿಯ ಮೂಲಕ ತುಂಬಲು ಅವಕಾಶ ನೀಡಬೇಕು. | |
| 85 | 4871463/2022 | ಶ್ರೀ ನಾಸಿರ್ ಖಾನ್ ಎ.<br>ಸಂಗೀತ ಶಿಕ್ಷಕರು<br>ರಾಮನಗರ ಜಿಲ್ಲೆ | ಕವಶಿಸಸದ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ಸಂಬಂಧ ಉಲ್ಲೇಖದಲ್ಲಿ ಪ್ರಸ್ತಾಪಿಸಿರುವ ಸರ್ಕಾರದ ತಿದ್ದುಪಡಿ ನಿಯಮಗಳ ಕರಡು ಪ್ರತಿ ಸಂಖ್ಯೆ: ಎಸ್‌ಡಬ್ಲ್ಯೂಡಿ 324 ಎಂಡಿಎಸ್2022 ದಿ: 30.09.2022 ಕ್ಕೆ ನಾನು ಈ ಕೆಳಕಂಡಂತೆ ನನ್ನ ಆಕ್ಷೇಪಣೆಗಳನ್ನು | ಕ್ರಮ ಸಂಖ್ಯೆ 85 ರ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿರುತ್ತದೆ. ದಿನಾಂಕ 30.09.2022 ರಂದು ಪ್ರಕಟಿಸಲಾಗಿರುವ ಕರಡು ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗಳು |



Generated from eOffice by NAGARAJ K L, KREIS-ADM-FDA(NKL), FIRST DIVISION ASSISTANT, KARNATAKA RESIDENTAL EDUCATIONAL INSTITUTIONS SOCIETY on 01/12/2022 11:25 AM

| | | | | |
|---|---|---|---|---|
| | | | ಸಲ್ಲಿಸುತ್ತಿದ್ದು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಈ ಹಿಂದೆ ಅಳವಡಿಸಿಕೊಂಡಿದ್ದ ಹಳೆಯ ವೃಂದ ಮತ್ತು ನೇಮಕಾತಿ ನಿಯಮಗಳಂತೆ ಹಾಗೂ ಸಂಘದಲ್ಲಿ ಅಳವಡಿಸಿಕೊಂಡಿದ್ದಂತಹ ಎಲ್ಲಾ ಬೋಧಕ ಸಿಬ್ಬಂದಿ/ಶಿಕ್ಷಕರ ಸಂಯುಕ್ತ ಜೇಷ್ಠತಾ ಪಟ್ಟಿಯಂತ ನಾನು ಪ್ರಾಂಶುಪಾಲರ ಹುದ್ದೆಗೆ ಆಯ್ಕೆಯಾಗಿದ್ದು ಕೇವಲ ನನ್ನ ಕೌನ್ಸಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೆ ಮಾತ್ರ ಬಾಕಿ ಇದ್ದು ನನಗೆ ಕೌನ್ಸೆಲಿಂಗ್ ಮೂಲಕ ಪ್ರಾಂಶುಪಾಲರ ಹುದ್ದೆಗೆ ಪದೋನ್ನತಿ ನೀಡಿ ಸ್ಥಳ ನನಗೆ ಸ್ಥಳ ಕೌನ್ಸಿಲಿಂಗ್ ಮೂಲಕ ಪ್ರಾಂಶುಪಾಲರ ಹುದ್ದೆಗೆ ಪದೋನ್ನತಿ ನೀಡಿ ಸ್ಥಳ ನಿಯುಕ್ತಿಗೊಳಿಸಬೇಕೇಂದು ಹಾಗೂ ಪ್ರಸ್ತಾಪಿಸಿರುವ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಯಿಂದ ಪ್ರಾಂಶುಪಾಲರ ಹುದ್ದೆಗೆ ಈಗಾಗಲೇ ಇರುವ ನಿಯಮಗಳಂತೆ ಆಯ್ಕೆಯಾಗಿರುವ ನನಗೆ ಘೋರ ಅನ್ಯಾಯವಾಗುತ್ತದೆ ಎಂಬ ವಿಷಯವನ್ನು ಈ ಮೂಲಕ ತಮ್ಮ ಅವಗಾಹನೆಗೆ ಸಲ್ಲಿಸುತ್ತಿದ್ದೇನೆ. | ಸರಿಯಾಗಿರುವುದು ಕಂಡು ಬಂದಿರುತ್ತದೆ. ಈ ಹಿನ್ನಲೆಯಲ್ಲಿ ನಿಮ್ಮ ಆಕ್ಷೇಪಣೆಗಳನ್ನು ತಿರಸ್ಕರಿಸಿದೆ. |
| 86 | 4873098/2022 | ಶ್ರೀ ಶರಣಬಸಯ್ಯ ಮತ್ತು ಇತರೆ ಸಂಗೀತ ಶಿಕ್ಷಕರು | ಕವಶಿಸಸರ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ಸಂಬಂಧ ಉಲ್ಲೇಖದಲ್ಲಿ ಪ್ರಸ್ತಾಪಿಸಿರುವ ಸರ್ಕಾರದ ತಿದ್ದುಪಡಿ ನಿಯಮಗಳ ಕರಡು ಪ್ರತಿ ಸಂಖ್ಯೆ: ಎಸ್‌ಡಬ್ಲ್ಯೂಡಿ 324 ಎಂಡಿಎಸ್ 2022 ದಿ: 30.09.2022 ಕ್ಕೆ ನಾನು ಈ ಕೆಳಕಂಡಂತೆ ನನ್ನ ಆಕ್ಷೇಪಣೆಗಳನ್ನು ಸಲ್ಲಿಸುತ್ತಿದ್ದು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಈ ಹಿಂದೆ ಅಳವಡಿಸಿಕೊಂಡಿದ್ದ ಹಳೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿದ್ದಂತೆ ಸಂಗೀತ ಶಿಕ್ಷಕರ ಹುದ್ದೆಯೂ ಒಂದು ಬೋಧಕ ಹುದ್ದೆಯಾಗಿರುವುದರಿಂದ ಹಾಗೂ ಒಂದ ಸಂಘದಲ್ಲಿ ಅಳವಡಿಸಿಕೊಂಡಿದ್ದಂತಹ ಎಲ್ಲಾ ಬೋಧಕ ಸಿಬ್ಬಂದಿ | ಕ್ರಮ ಸಂಖ್ಯೆ 86ರ ಆಕ್ಷೇಪಣೆಗಳನ್ನ ಪರಿಶೀಲಿಸಲಾಗಿರುತ್ತದೆ. ದಿನಾಂಕ:30.09.2022 ರಂದು ಪ್ರಕಟಿಸಲಾಗಿರುವ ಕರಡು ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗಳು ಸರಿಯಾಗಿರುವುದು ಕಂಡು ಬಂದಿರುತ್ತದೆ. ಈ ಹಿನ್ನಲೆಯಲ್ಲಿ ನಿಮ್ಮ ಆಕ್ಷೇಪಣೆಗಳನ್ನು ತಿರಸ್ಕರಿಸಿದೆ. |



Generated from eOffice by NAGARAJ K L, KREIS-ADM-FDA(NKL), FIRST DIVISION ASSISTANT, KARNATAKA RESIDENTAL EDUCATIONAL INSTITUTIONS SOCIETY on 01/12/2022 11:25 AM

| | | | | |
|---|---|---|---|---|
| | | | ಶಿಕ್ಷಕರ ಸಂಯುಕ್ತ ಜೇಷ್ಠತಾ ಪಟ್ಟಿಯಂತೆ ಪ್ರಾಂಶುಪಾಲರ ಹುದ್ದೆಗೆ ಸಂಗೀತ ಶಿಕ್ಷಕರನ್ನು ಪದೋನ್ನತಿ ನೀಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ, | |
| 87 ರಿಂದ 103 | 4865044/ 2022 4864998/ 2022 | ಶ್ರೀ ಸಂಗಮೇಶ, ಕಂಪ್ಯೂಟರ್ ಶಿಕ್ಷಕರು, ಮೊರಾರ್ಜಿ ದೇಸಾಯಿ ವಸತಿ ಶಾಲೆ ಬೀದರ್ ಮತ್ತು ಇತರೆ 16 ಆಕ್ಷೇಪಣೆಗಳು | ಅನುಸೂಚಿ-II ರಲ್ಲಿ ಪ್ರಸ್ತಾಪಿತ ವೃಂದ ಮತ್ತು ನೇಮಕಾತಿ ನಿಯಮಗಳು ಕಲಂನಲ್ಲಿ "ಕ್ರೀಡಾ ವಸತಿ ಶಾಲೆಗಳ ಪ್ರಾಂಶುಪಾಲರು" ಹುದ್ದೆಗಳಿಗೆ ನೇಮಕಾತಿ ಕಲಂನಲ್ಲಿ ಜೇಷ್ಠತೆಯ ಆಧಾರದ ಮೇಲೆ ದೈಹಿಕ ಶಿಕ್ಷಣ ವೃಂದದಿಂದ ಬಡ್ತಿ ಮೂಲಕ ತುಂಬಬೇಕು" ಎಂಬುದಕ್ಕೆ ನಮ್ಮ ಆಕ್ಷೇಪವಿದೆ.<br><br>**ಕಾರಣಗಳು:** ಕ್ರೀಡಾ ವಸತಿ ಶಾಲೆಗಳಲ್ಲಿಯೂ 6-10 ನೇ ತರಗತಿಯವರೆಗೆ ಮತ್ತು 11-12 ನೇ ತರಗತಿಯವರೆಗೆ ಸಾಮಾನ್ಯ ಶಿಕ್ಷಣ ನೀಡಬೇಕಾಗಿದೆ. ಕರ್ನಾಟಕ ಸರ್ಕಾರದ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಕ್ರೀಡಾ ವಸತಿ ಶಾಲೆಗಳನ್ನು ನಡೆಸುತ್ತಿದ್ದು, ಸದರಿ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರನ್ನು ಮಾತ್ರ ಪ್ರಾಂಶುಪಾಲರು ಹುದ್ದೆಗಳಿಗೆ ನಿಗಧಿಪಡಿಸಿರುವುದಿಲ್ಲ ಕ್ರೀಡಾ ವಸತಿ ಶಾಲೆಗಳಿಗೆ ದೈಹಿಕ ಶಿಕ್ಷಣ ಶಿಕ್ಷಕರನ್ನು ಮಾತ್ರ ಪ್ರಾಂಶುಪಾಲರಾಗಿ ನೇಮಿಸುವ ಬದಲಿಗೆ ಎಲ್ಲಾ ಶಿಕ್ಷಕರಿಗೆ ಅವಕಾಶ ನೀಡಲಾಗಿದೆ.<br><br>**ಮನವಿ**: ಈ ಮೇಲಿನ ಕಾರಣಗಳಿಂದ, ಅನುಸೂಚಿ-I ರಲ್ಲಿ ಮತ್ತು ಅನುಸೂಚಿ-II ರಲ್ಲಿ ಪ್ರಸ್ತಾಪಿತ ವೃಂದ ಮತ್ತು ನೇಮಕಾತಿ ನಿಯಮಗಳು ಕಾಲಂನಲ್ಲಿ "ಕ್ರೀಡಾವಸತಿ ಶಾಲೆಗಳ ಪ್ರಾಂಶುಪಾಲರು "ಹುದ್ದೆಗಳಿಗೆ ನೇಮಕಾತಿ ವಿಧಾನದಲ್ಲಿ" ಜೇಷ್ಠತೆಯ ಆಧಾರದ ಮೇಲೆ ದೈಹಿಕ ಶಿಕ್ಷಣ ವೃಂದದಿಂದ ಬಡ್ತಿ ಮೂಲಕ ತುಂಬಬೇಕು ಎಂಬುದನ್ನು ತೆಗೆದುಹಾಕಬೇಕಾಗಿ ಕಳಕಳಿಯ ವಿನಂತಿ ಅಥವಾ | ಕ್ರಮ ಸಂಖ್ಯೆ 87 ರಿಂದ 103 ರ ವರೆಗಿನ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿರುತ್ತದೆ. ದಿನಾಂಕ 30.09.2022 ರಂದು ಪ್ರಕಟಿಸಲಾಗಿರುವ ಕರಡು ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗಳು ಸರಿಯಾಗಿರುವುದು ಕಂಡು ಬಂದಿರುತ್ತದೆ. ಈ ಹಿನ್ನಲೆಯಲ್ಲಿ ನಿಮ್ಮ ಆಕ್ಷೇಪಣೆಗಳನ್ನು ತಿರಸ್ಕರಿಸಿದೆ. |



Generated from eOffice by NAGARAJ K L, KREIS-ADM-FDA(NKL), FIRST DIVISION ASSISTANT, KARNATAKA RESIDENTAL EDUCATIONAL INSTITUTIONS SOCIETY on 01/12/2022

| | | | | |
|---|---|---|---|---|
| | | | ತಗೆಯಲು ಸಾಧ್ಯವಿಲ್ಲವಾದಲ್ಲಿ 60 ವಸತಿ ಶಾಲೆಗಳನ್ನು ಮಾಹಿತಿ ತಂತ್ರಜ್ಞಾನ ವಸತಿ ಶಾಲೆಗಳನ್ನಾಗಿ ಪರಿವರ್ತಿಸಿ, ಸದರಿ ವಸತಿ ಶಾಲೆಗಳ ಪ್ರಾಂಶುಪಾಲರ ಹುದ್ದೆಗಳಿಗೆ ಕಂಪ್ಯೂಟರ್ ಶಿಕ್ಷಕರಿಗೆ ಮಾತ್ರ ಪದೋನ್ನತಿ ನೀಡಬೇಕಾಗಿ ವಿನಂತಿ. | |
| 121 | 4874388/2022 | ಶ್ರೀ ಬಸವರಾಜ ಲೇಶಪ್ಪ ಸಂಕದಾಳ, ಗಣಕಯಂತ್ರ ಶಿಕ್ಷಕರು, ಬಾಗಲಕೋಟೆ ಜಿಲ್ಲೆ. | ಉಲ್ಲೇಖ02 ರ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಪ್ರಸ್ತಾಪಿತ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಭಾಷಾ (ಕನ್ನಡ, ಆಂಗ್ಲ, ಮತ್ತು ಹಿಂದಿ) ಮತ್ತು ವಿಷಯ (ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ) ಶಿಕ್ಷಕರು ಹಾಗೂ ಗಣಕಯಂತ್ರ ಶಿಕ್ಷಕರು, ದೈಹಿಕ ಶಿಕ್ಷಣ ಶಿಕ್ಷಕರು ಜೊತೆಗೆ ಸಂಗೀತ ಶಿಕ್ಷಕರು ಎಂದು ಒಂಬತ್ತು ಹುದ್ದೆಗಳನ್ನು ರಚಿಸಲಾಗಿದೆ. ಮತ್ತು ಪ್ರಾಂಶುಪಾಲರಿಗೆ ಹುದ್ದೆಗೆ ಸಂಯೋಜಿತ ಜೇಷ್ಠತೆ ಕಮ್ ಮೆರಿಟ್ ಆಧಾರದ ಮೇಲೆ ಶಿಕ್ಷಕರ ವೃಂದದ ಪೈಕಿ ಬಡ್ತಿ ಮೂಲಕ ಶೇ 75 ರಷ್ಟು ಹುದ್ದೆಗಳನ್ನು ತುಂಬಬೇಕು ಆಯಾ ವೃಂದದಲ್ಲಿನ ಸೇವಾವಧಿಯ ಆಧಾರದ ಮೇಲೆ ಜೇಷ್ಠತೆಯನ್ನು ನಿರ್ಧರಿಸಬೇಕು ಎಂದು ರಚಿಸಲಾಗಿದೆ.<br><br>**ಆಕ್ಷೇಪಣೆಗಳು ಮತ್ತು ಸಲಹೆಗಳು:**<br><br>1. ಪ್ರಸ್ತಾಪಿತ ವೃಂದ ಮತ್ತು ನೇಮಕಾತಿ ನಿಯಮಗಳು ಪಟ್ಟಿಯ ಕ್ರಮ ಸಂಖ್ಯೆಯ 26ರ ಸಂಗಡ ವಸತಿ ಶಾಲೆಗಳ ಪ್ರಾಂಶುಪಾಲರಗಳ ಹುದ್ದೆಗೆ ನೇಮಕಾತಿ ವಿಧಾನ 3ನೇ ಕಾಲಂನಲ್ಲಿ, ಈ ನೂರರಷ್ಟು ಸಂಯೋಜಿತ ಹೇಗ್ಯತೆಯ ಆಧಾರದ ಮೇಲಿ' ವಿಷಯ ಶಿಕ್ಷಕರ ಬದಲಿಗೆ ಶಿಕ್ಷಕರ ವೃಂದ ಪ್ರತಿ (ದೈಹಿಕ ಶಿಕ್ಷಣ ಹಾಗೂ ಸಂಗೀತ ಶಿಕ್ಷಕರನ್ನು ಮಂಜಸಿಸಿ) ಬಡ್ತಿ ಮೂಲಕ ತುಂಬಬೇಕು ಎಂದು ಇದೆ. ಇಲ್ಲಿ ವಿಷಯದಲ್ಲಿಂದು ಎಂದರೆ ಗಣಿತ, ವಿಜ್ಞಾನ ಮತ್ತು | ಕ್ರಮ ಸಂಖ್ಯೆ 121ರ ಆಕ್ಷೇಪಣೆಯನ್ನುಪರಿಶೀಲಿಸಲಾಗಿರುತ್ತದೆ. ದಿನಾಂಕ 30.09.2022 ರಂದು ಪ್ರಕಟಿಸಲಾಗಿರುವ ಕರಡು ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗಳು ಸರಿಯಾಗಿರುವುದು ಕಂಡು ಬಂದಿರುತ್ತದೆ. ಈ ಹಿನ್ನಲೆಯಲ್ಲಿ ನಿಮ್ಮ ಆಕ್ಷೇಪಣೆಗಳನ್ನು ತಿರಸ್ಕರಿಸಿದೆ. |



Generated from eOffice by NAGARAJ K L, KREIS-ADM-FDA(NKL), FIRST DIVISION ASSISTANT, KARNATAKA RESIDENTAL EDUCATIONAL INSTITUTIONS SOCIETY on 01/12/2022 11:25 AM

| | | | | |
|---|---|---|---|---|
| | | | ಸಮಾಜ ವಿಜ್ಞಾನ ಶಿಕ್ಷಕರು ಎಂದು ಅರ್ಥವಾಗುತ್ತದೆ, ಹೀಗಾಗಿ ಭಾಷಾ ಶಿಕ್ಷಕರು ಮತ್ತು ಗಣಕಯಂತ್ರ ಶಿಕ್ಷಕರು ಹೊರಗುಳಿಯುತ್ತಾರೆ. ಕಾರಣ ಇಲ್ಲಿ ಶಿಕ್ಷಕ ವೃಂದದ ಪೈಕಿ (ದೈಹಿಕ ಶಿಕ್ಷಣ ಹಾಗೂ ಸಂಗೀತ ಶಿಕ್ಷಕರನ್ನು ಹೊರತುಪಡಿಸಿ) ಬಡ್ತಿ ಮೂಲಕ ತುಂಬಬೇಕು ಎಂದು ತಿದ್ದುಪಡಿ ಮಾಡಬೇಕು ಎಂದು ಕೋರಿಕೊಳ್ಳುತ್ತೇನೆ.<br><br>2. ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಗಳು ಅನುಸೂಚಿ 1ರ ಕ್ರಮ ಸಂಖ್ಯೆ 27 ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಉಪ ಪ್ರಾಂಶುಪಾಲರಗಳು ನೇಮಕಾತಿ ವಿಧಾನ ಕಾಲಂ ಸಂಖ್ಯೆ ಸಂಯೋಜಿತ ಜೇಷ್ಠತೆ ಕಮ್ ಮೆರಿಟ್ ಅಧಾರದ ಮೇಲೆ ಶಿಕ್ಷಕರ ವೃಂದದ ಪೈಕಿ ಬಡ್ತಿ ಮೂಲಕ ಶೇ. ಎಪ್ಪತ್ತದರಷ್ಟು ಹುದ್ದೆಗಳನ್ನು ತುಂಬಬೇಕು ಅಂತಾ ಇದ್ದು, ಪ್ರಸ್ತಾಪಿತ ವೃಂದ ಮತ್ತು ನೇಮಕಾತಿ ನಿಯಮಗಳು ಪಟ್ಟಿಯ ನೇಮಕಾತಿ ವಿಧಾನ 13ನೇ ಕಾಲಂನಲ್ಲಿ, ಶೇ. ನೂರರಷ್ಟು ಸಂಯೋಜಿತ ಜೇಷ್ಠತೆ ಆಧಾರದ ಮೇಲೆ ದೈಹಿಕ ಶಿಕ್ಷಣ ಶಿಕ್ಷಕರ ವೃಂದದ ಜೊತೆಗೆ ಗಣಕಯಂತ್ರ ಶಿಕ್ಷಕರ ವೃಂದದಿಂದ ಬಡ್ತಿಗೆ ಪರಿಗಣಿಸಬೇಕು ಮತ್ತು ಅನುಸೂಚಿ-10 ಕ್ರಮ ಸಂಖ್ಯೆ 27 ರ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಉಪ ಪ್ರಾಂಶುಪಾಲರುಗಳು ಕಾಲ ಸಂಖ್ಯೆ 14 ರಲ್ಲಿ ಉಪ ಪ್ರಾಂಶುಪಾಲರಗಳ ಹುದ್ದೆಗಾಗಿ ಬಡ್ತಿಯ ವಿಧಾನ, ದೈಹಿಕ ಶಿಕ್ಷಣ ಶಿಕ್ಷಕರ ವೃಂದದ ಜೊತೆಗೆ ಗಣಕಯಂತ್ರ ಶಿಕ್ಷಕರ ವೃಂದದಲ್ಲಿ ಐದು ವರ್ಷಗಳಿಗೆ ಕಡಿಮೆಯಿರದಂತೆ ಸೇವೆ ಸಲ್ಲಿಸಿರಬೇಕು ಎಂದು ಗಣಕಯಂತ್ರ ಶಿಕ್ಷಕರುಗಳಿಗೆ ಉಪ ಪ್ರಾಂಶುಪಾಲರ ಹುದ್ದೆಗಳಿಗೆ ಮುಂಬಡ್ತಿಗೆ ಅವಕಾಶ ನೀಡಬೇಕು,<br><br>ಈ ಮೇಲ್ಕಂಡ ಆಕ್ಷೇಪಣೆಗಳನ್ನು ನಿಯಮಾನುಸಾರ ತಾವುಗಳು ದಯಮಾಡಿ ಪರಿಶೀಲಿಸಿ ಕರ್ನಾಟಕ ಶಿಕ್ಷಣ | |

| | | | | |
|---|---|---|---|---|
| | | | ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೇರ್ಪಡೆಗೊಳಿಸಿ, ಹತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದ ಗಣಕಯಂತ್ರ ಶಿಕ್ಷಕರಿಗೆ ಕ್ರಮ ಸಂಖ್ಯೆ 26ರ ಪ್ರಾಂಶುಪಾಲರ ಹುದ್ದೆಗಳ ಮುಂಬಡ್ತಿಗೆ ಹಾಗೂ ಕ್ರಮಸಂಖ್ಯೆ 27ರ ಉಪ ಪ್ರಾಂಶುಪಾಲರ ಹುದ್ದೆಗಳ ಮುಂಬಡ್ತಿಗೆ ಅವಕಾಶ ಕಲ್ಪಿಸಬೇಕೆಂದು ತಮ್ಮಲ್ಲಿ ಗೌರವಪೂರ್ವಕವಾಗಿ ವಿನಂತಿಸಿಕೊಳ್ಳುತ್ತಿದ್ದೇನೆ. | |
| 122 | 4846203/2022 | ಶ್ರೀಮತಿ. ಭವ್ಯ ನರಸಿಂಹಮೂರ್ತಿ ಅಧ್ಯಕ್ಷರು<br>Karnataka State Competitive Examination Aspirants Association(R), Bangalor10 | ಸರ್ಕಾರದ ಪತ್ರ ಸಂಖ್ಯೆ. ಸಕಇ 324 ಎಂ.ಡಿ.ಎಸ್ 2022 ದಿನಾಂಕ:30-09-2022 ರಲ್ಲಿ ಹೊರಡಿಸಿರುವ ಸರ್ಕಾರದ ಆದೇಶದಲ್ಲಿ ಪ್ರಸ್ತಾಪಿಸಿರುವ ನಿಯಮವು KREIS ವಸತಿ ಶಾಲೆಯ ಪ್ರಾಂಶುಪಾಲರು, ಉಪಪ್ರಾಂಶುಪಾಲರು ಹಾಗೂ ಇತರೆ ವೃಂದದ ಹುದ್ದೆಗಳಲ್ಲಿ ಶೇ.100 ರಷ್ಟು ಖಾಲಿ ಇರುವ ಹುದ್ದೆಗಳನ್ನು ಬಡ್ತಿ ಮೂಲಕ ತುಂಬಬೇಕೆಂದು ಆದೇಶ ಹೊರಡಿಸಲಾಗಿದೆ. ಆದರೆ ನಮಗೆ ಶೇ.75 ರಷ್ಟು ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಹಾಗೂ ಶೇ.25 ರಷ್ಟು ಹುದ್ದೆಗಳನ್ನು ಬಡ್ತಿ ಮೂಲಕ ತುಂಬಬೇಕೆಂಬುದು ನಮ್ಮ ಪ್ರಸ್ತುತ ಬೇಡಿಕೆಯಾಗಿದೆ. ಈಗ ಪ್ರಸ್ತಾಪಿಸಿರುವ ನಿಯಮಗಳಿಂದ ಉದ್ಯೋಗ ಆಕಾಂಷಿಗಳಿಗೆ ಅನ್ಯಾಯವಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಇದ್ದು ಆಕಾಂಕ್ಷಿಗಳಿಗೆ ಈ ಹಿಂದಿನಂತೆ ಶೇ.75 ರಷ್ಟು ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಬೇಕೆಂದು ಬೇಡಿಕೆಯನ್ನು ನಿಮ್ಮ ಮುಂದಿಡುತ್ತಾ ಈ ಆದೇಶಕ್ಕೆ ಆಕ್ಷೇಪಣೆ ವ್ಯಕ್ತಪಡಿಸಲಾಗಿರುತ್ತದೆ. ಬೇರೆ ಯಾವುದೇ ಇಲಾಖೆಯಲ್ಲಿ ಈ ತರಹದ ನೇಮಕಾತಿ ವ್ಯವಸ್ಥೆ ಇರದ ಕಾರಣ ಹೊಸ ಅಭ್ಯರ್ಥಿಗಳಿಗೆ ಅವಕಾಶ ನೀಡುವ ಮೂಲಕ ಸ್ವಾವಲಂಬಿಗಳಾಗಿ ಬದುಕಲು ದಾರಿ ಮಾಡಿಕೊಡಬಹುದಾಗಿದೆ. ಆದ್ದರಿಂದ ತಮ್ಮ | ಕ್ರ.ಸಂ. 122 ರ ಆಕ್ಷೇಪಣೆಯನ್ನು ಪರಿಶೀಲಿಸಿದ್ದು,<br>ನೀವು ಸಲ್ಲಿಸಿರುವ ಆಕ್ಷೇಪಣೆಯು ಪ್ರಸ್ತುತ ಪ್ರಸ್ತಾಪಿಸಲಾಗಿರುವ ಕರಡು ವೃಂದ & ನೇಮಕಾತಿ ನಿಯಮಗಳಿಗೆ ಅನ್ವಯವಾಗದೇ ಇರುವುದರಿಂದ ತಮ್ಮ ಆಕ್ಷೇಪಣೆಗಳನ್ನು ತಿರಸ್ಕರಿಸಿದೆ. |



Generated from eOffice by NAGARAJ K L, KREIS-ADM-FDA(NKL), FIRST DIVISION ASSISTANT, KARNATAKA RESIDENTAL EDUCATIONAL INSTITUTIONS SOCIETY on 01/12/2022 11:25 AM

| | | | | |
|---|---|---|---|---|
| | | | ಆಕ್ಷೇಪಣೆಯನ್ನು ಪರಿಗಣಿಸಿ ನಮ್ಮ ಉದ್ಯೋಗ ಆಕಾಂಕ್ಷಿಗಳಿಗೆ ನ್ಯಾಯವನ್ನು ನೀಡಬೇಕೆಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ. | |
| 123 | 4873253/2022 | ಶಿವಾನಂದ ದಂಡಣ್ಣನವರ್ ಶಿಕ್ಷಕರು ಮೊದೇಶಾ ಮಂಟೂರು ರಾಯಭಾಗ ಬೆಳಗಾವಿ | It's my Proud Privilege to be a part of KREIS Institution from joining to service on 23-08-2012 till present. I do here by submit my objection in lieu of "**Non-consideration of English medium candidates for the promotion as Principal to KREIS Schools".** We being English medium candidates are few working but we too are the Karnataka State Candidates who are not prioritized as Rural as well as Regional Language candidate reservation quotas during the recruitment process earlier.<br><br>So, I kindly request you to take necessary steps in this regard. Please this may be taken to consideration for further process. | ಕ್ರ.ಸಂ. 12 ರ ಆಕ್ಷೇಪಣೆಯನ್ನು ಪರಿಶೀಲಿಸಿದ್ದು,<br><br>ನೀವು ಸಲ್ಲಿಸಿರುವ ಆಕ್ಷೇಪಣೆಯು ಪ್ರಸ್ತುತ ಪ್ರಸ್ತಾಪಿಸಲಾಗಿರುವ ಕರಡು ವೃಂದ & ನೇಮಕಾತಿ ನಿಯಮಗಳಿಗೆ ಅನ್ವಯವಾಗದೇ ಇರುವುದರಿಂದ ತಮ್ಮ ಆಕ್ಷೇಪಣೆಗಳನ್ನು ತಿರಸ್ಕರಿಸಿದೆ. |

(ಶಂಭುಲಿಂಗಯ್ಯ)
ಸರ್ಕಾರದ ಜಂಟಿ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ.



Generated from eOffice by NAGARAJ K L, KREIS-ADM-FDA(NKL), FIRST DIVISION ASSISTANT, KARNATAKA RESIDENTAL EDUCATIONAL INSTITUTIONS SOCIETY on 01/12/2022 11:25 AM